**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.2**

**ಚಾಸಾ.7**

| | | |
|---|---|---|
| ಸಾಕ್ಷಿದಾರರ ಹೆಸರು | - | ರಘುರಾಮ ಶೆಟ್ಟಿ |
| ತಂದೆಯ ಹೆಸರು | - | ಲೇಟ್ ಶೇಷ ಶೆಟ್ಟಿ |
| ವಯಸ್ಸು | - | 73 ವರ್ಷ |
| ಉದ್ಯೋಗ | - | ನಿವೃತ್ತ ಶಿಕ್ಷಕರು |
| ವಿಳಾಸ | - | ಕುಕ್ಕೆಹಳ್ಳಿ ಗ್ರಾಮ, ಉಡುಪಿ ತಾಲೂಕು |

ದಿನಾಂಕಃ 18-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ನನಗೆ ಚಾಸಾ5 ಮತ್ತು 6 ಇವರ ಪರಿಚಯ ಇದೆ. ಮೃತ ಕೃತಿಕ್ ನ ಪರಿಚಯ ಇದೆ. ಆತ ನಮ್ಮ ನೆರೆಮನೆಯವನು. ಆತನು ಮೃತಪಟ್ಟಿದ್ದು ಅವರ ಮನೆಯ ಹತ್ತಿರ ದರ್ಖಾಸ್ತು ಜಾಗದಲ್ಲಿ ಮೃತ ದೇಹ ದೊರೆತಿದ್ದು ಸದ್ರಿ ಮೃತ ದೇಹವನ್ನು ಪರಿಶೀಲಿಸಲು ಪೋಲಿಸರು ಸ್ಥಳಕ್ಕೆ ಬಂದಿದ್ದರು. ಆ ಶವವನ್ನು ಪೋಲಿಸರು ನನ್ನ ಸಮಕ್ಷಮ ಪರಿಶೀಲಿಸಿರುತ್ತಾರೆ. ಸದ್ರಿ ಶವದ ಕುತ್ತಿಗೆಯಲ್ಲಿ ಮತ್ತು ಎಡ ಕಾಲಿನ ಕಿರು ಬೆರಳಿನಲ್ಲಿ ಗಾಯವಿತ್ತು. ಅದೇ ಸಮಯ ಮೃತ ದೇಹದಲ್ಲಿ ಡೆತ್ ನೋಟ್ ದೊರೆತಿತ್ತು. ಆ ಡೆತ್ ನೋಟ್ ನಲ್ಲಿ ಶಾರದಾ ಎನ್ನುವ ಆಕೆಯ ಹೆಸರನ್ನು ನಮೂದಿಸಿ ಆತ್ಮಹತ್ಯೆಯ ಬಗ್ಗೆ ನಮೂದಿಸಲಾಗಿತ್ತು. ಅದೇ ಸ್ಥಳದಲ್ಲಿ ಪೋಲಿಸರು ಶವ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಆ ಶವ ಪಂಚನಾಮೆಗೆ ನಾನು ಹಾಗೂ ಚಾಸಾ5 ಮತ್ತು 6 ರವರು ಸಹಾ ಸಹಿ ಮಾಡಿರುತ್ತೇವೆ. ಅದೇ ಸಮಯ ಪೋಲಿಸರು ಛಾಯಾ ಚಿತ್ರ ತೆಗೆದಿರುತ್ತಾರೆ. ಪಂಚಾಯತ್‌ದಾರಿಗೆ ನೀಡಿದ ನೋಟೀಸನ್ನು ನಿಪಿ-2 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯನ್ನು ನಿಪಿ-3 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆಗ ಮೃತನ ಸಂಬಂಧಿಕರು

ಸ್ಥಳದಲ್ಲಿ ಹಾಜರಿದ್ದರು. ಎರಡು ಪೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಪ್ಯಾಕ್ ಮಾಡಿ ಸೀಲು ಮಾಡಲಾದ ಮುದ್ದೆಮಾಲನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಡೆತ್ ನೋಟನ್ನು ನಿಪಿ-6 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್. ಎ. ರವರಿಂದ</u>**

ಕೃತಿಕ್ ಕಾಲೇಜು ಶಿಕ್ಷಣ ಮಾಡಿದ್ದ. ಆತನಿಗೆ ಮಧ್ಯಪಾನ ಮಾಡುವ ಹವ್ಯಾಸ ಇದ್ದಿರಬಹುದು. ಆತನು ಹುಡುಗಿಯರ ಜೊತೆ ಸುತ್ತುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಶವ ಮಹಜರಿನಲ್ಲಿ ಏನೆಲ್ಲಾ ಬರೆದಿದೆ ಎಂದು ಸಂಪೂರ್ಣವಾಗಿ ಹೇಳಲು ಬರುವುದಿಲ್ಲ. ಡೆತ್ ನೋಟ್ ಶವದ ಅಂಗಿಯ ಕಿಸೆಯಲ್ಲಿ ಇತ್ತು, ಅದನ್ನು ನಾನು ಓದಿ ನೋಡಿಲ್ಲ. ಕೃತಿಕ್‌ನ ಜೀವನದಲ್ಲಿ ಜಿಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೃತ ದೇಹ ದೊರಕಿದ ಸ್ಥಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.